Acquiring of Lands by the Town Municipal Council, Kolar, for providing Sites to Beedi Workers.

*Q.—431. Sri P. VENKATAGIRIYAPPA (Kolar).—

Will the Government be pleased to state :—

(*a*) whether they are aware that the Town Municipal Council, Kolar, has acquired lands for providing sites to Beedi Workers and other workers ;

(*b*) what is the area acquired and when the possession of the lands was taken by the Municipal Council ;

(*c* the number of Beedi Workers who have applied for sites about four years back ;

(*d*) the number of Beedi Workers who applied for sites for the last one year ;

(*e*) the action taken to dispose the sites as originally planned to the Beedi Workers ?

*A.—Sri K. PUTTASWAMY (Minister for Municipal Administration).—

(*a*) Yes.
(*b*) (i) 6 acres and 22 guntas.
(ii) in November 1962.
(*c*) 59.
(*d*) 18.
(*e*) The request of the Beedi Workers is being considered by the Town Municipal Council, Kolar, along with other applications of the Muslims in general.

ಶ್ರೀ ಪಿ. ವೆಂಕಟಗಿರಿಯಪ್ಪ.—ಅರು ಎಕರೆ ಇಪ್ಪತ್ತೆರಡು ಗುಂಟೆ ಅಕ್ವೈರ್ ಮಾಡಿಕೊಂಡಿದ್ದೀರಿ, ಎಷ್ಟು ಸೈಟ್ಸ್ ಫಾರಂ ಮಾಡಿದ್ದೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—20.

ಶ್ರೀ ಪಿ. ವೆಂಕಟಗಿರಿಯಪ್ಪ.—ನವಂಬರ್ 1962ರಲ್ಲಿ ಸ್ವಾಧೀನಕ್ಕೆ ತೆಗೆದುಕೊಂಡಿದ್ದೀರಿ ಅವತ್ತಿನಿಂದ ಇದುವರೆಗೂ ಏಕೆ ಸೈಟ್ಸ್‌ನ್ನು ಡಿಸ್‌ಹೋಸ್ ಮಾಡಲಿಲ್ಲ ?

ಶ್ರೀ ಕೆ. ಪುಟ್ಟಸ್ವಾಮಿ.—ಐನೂರು ಅರ್ಜಿಗಳು ಬಂದಿವೆ ಅದನ್ನು ವಿತರಣೆ ಮಾಡುವುದಕ್ಕೆ ಯಾರಿಗೆ ಅರ್ಹತೆ ಇದೆ ಎಂಬುದನ್ನು ತೀರ್ಮಾನ ಮಾಡಲು ಪುರಸಭೆಯವರು 24ನೇ ಏಪ್ರಿಲ್ 1963ರಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಸಮಿತಿ ನೇಮಕ ಮಾಡಿದ್ದರೂ ಕೂಡ ಇಷ್ಟು ದಿವಸದವರೆಗೂ ಅವರು ಏಕೆ ತೀರ್ಮಾನವನ್ನು ತೆಗೆದುಕೊಂಡಿಲ್ಲ ?

ಶ್ರೀ ಕೆ. ಪುಟ್ಟಸ್ವಾಮಿ.—ಏಕೆ ತೆಗೆದುಕೊಳ್ಳಲಿಲ್ಲ ಎಂದು ನಾನೂ ಕೇಳುತ್ತೇನೆ. ಅಲ್ಲರತಕ್ಕ ಜನರೂ ಕೂಡ ಕೇಳಬೇಕು.

ಶ್ರೀ ಪಿ. ವೆಂಕಟಗಿರಿಯಪ್ಪ.—ಮೊದಲು ಈ ಜಮೀನನ್ನು ಬೀಡಿ ವರ್‌ಕರ್ಸ್ ಮತ್ತು ಮೋಟಾರ್ ವರ್‌ಕರ್ಸ್ ಅನುಕೂಲಕ್ಕಾಗಿ ಅಕ್ವೈರ್ ಮಾಡಿಕೊಂಡಿದ್ದರು. ಆದರೆ ಮುಸಲ್ಮಾನರಿಂದ ಬಂದಿರುವ ಇತರ ಅರ್ಜಿಗಳೊಡನೆ ಬೀಡಿ ಕಾರ್ಮಿಕರ ಕೋರಿಕೆಗಳನ್ನೂ ತಾವು (ಇ)ಗೆ ಉತ್ತರಕೊಡುತ್ತಾ ಪರಿಶೀಲನೆಗೆ ತೆಗೆದುಕೊಳ್ಳಲಾಗುತ್ತಿದೆ ಎಂದು ಹೇಳಿದ್ದೀರಿ. ಹಾಗಾದರೆ ಇದರಲ್ಲಿ ಮುಸ್ಲಿಮರಿಗೆ ಮಾತ್ರ ಸೈಟು ಕೊಡುವುದು ಎಂದು ಅರ್ಥವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಪುರಸಭೆಯವರು ಮುಸಲ್ಮಾನರಿಗೆ ಕೊಡಬೇಕೆಂದು ಅಕ್ವೈರ್ ಮಾಡಿಕೊಂಡಿದ್ದರೂ ಇರಬಹುದು, ಆದರೆ ಯಾವುದೇ ಒಂದು ವರ್ಗದ ಜನರಿಗೆ ಅಥವಾ ಒಂದು

ಕೋಮಿನ ಜನರಿಗೆ ಯಾವುದಾದರೂ ಒಂದು ಬದಾವಣೆ ಮಾಸಲಾಗಿ ಇಡುವುದು ಸರಿಯಲ್ಲ ಎಂಬುದು ಸರ್ಕಾರದ ಅಭಿಪ್ರಾಯ, ಡೆಪ್ಯುಟಿ ಕಮಿಷನರೂ ಕೂಡ ಅದನ್ನು ತಿಳಿಸಿದ್ದಾರೆ. ಮುಸ್ಲಿಂರ ಅರ್ಜಿಗಳು ಅಲ್ಲದೇ ಬೇರೆ ಇತರ ಬಡ ಜನರಿಂದ ಕೂಡ ಅರ್ಜಿಗಳು ಬಂದಿವೆ ಎಂದು, ಅಲ್ಲಿ ಸ್ಟೈಟು ಮಾಡಿರುವದೇ 30-40 ಚಿಕ್ಕಸ್ಟೈಟುಗಳನ್ನು ಮಾಡಿದ್ದಾರೆ. ಬಡವರಾಗಿರುವವರು ಯಾವುದೇ ಕೆಲಸ ಮಾಡುತ್ತಾ ಇರಲಿ, ಯಾವ ಕೋಮಿಗೆ ಸೇರಿರಲಿ ಅವರ ಅರ್ಜಿಗಳನ್ನು ಪರಿಶೀಲನೆ ಮಾಡಬೇಕಾದ್ದು ಅಗತ್ಯ ಎಂದು ಅವರಿಗೆ ತಿಳಿಸಲಾಗುತ್ತದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಒಂದುವೇಳೆ ಪುರಸಭೆಯವರು ಬರೀ ಮುಸಲ್ಮಾನರಿಗೇ ಕೊಟ್ಟಿದ್ದರೆ ಅದನ್ನು ರದ್ದುಪಡಿಸುತ್ತೀರಾ ?

ಅಧ್ಯಕ್ಷರು.—ಕೊಟ್ಟಿದ್ದರೆ ಮಾಡುತ್ತೀರಾ ಎಂದರೆ ಅದು ಹೈಪೊಥಿಟಿಕಲ್ ಪ್ರಶ್ನೆ ಆಯಿತು.

ಶ್ರೀ ಇ. ನಾರಾಯಣಗೌಡ.—ಮೊದಲು ಬೀಡಿ ವರ್ಕರ್ಸ್ ಮತ್ತು ಮೋಟಾರ್ ವರ್ಕರ್ಸ್ ಸ್ಟೈಟುಗಳನ್ನು ಕೊಡಬೇಕೆಂದು ಕೇಳಿಕೊಂಡಿದ್ದರು ಆದ್ದರಿಂದ ಮೊದಲು ಅವರ ಅರ್ಜಿಗಳನ್ನು ಕನ್‌ಸಿಡರ್ ಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಸ್ಕೈಟ್ ವಿಂಗಡಣೆ ಮಾಡಿರುವುದು 30-40, ಸಾಮಾನ್ಯವಾಗಿ ಬಡವರು ವಾಸ ಮಾಡುವುದಕ್ಕೆ ಲಾಯಕ್ಕಾಗಿರುವಂತಹ ಸ್ಟೈಟುಗಳನ್ನೇ ಮಾಡಿದ್ದಾರೆ. ಬಡವರು ಯಾವುದೇ ವರ್ಗಕ್ಕೆ ಸೇರಿರಲಿ ಯಾವ ಕೋಮಿನವರೇ ಆಗಿರಲಿ ಅವರ ಅರ್ಜಿಗಳನ್ನು ಪರಿಶೀಲನೆ ಮಾಡಬೇಕಾದ್ದು ಅಗತ್ಯ, ಅದೂ ಅಲ್ಲದೇ ಅದಕ್ಕೆ ಲಗತ್ತಾಗಿ ಇನ್ನೊಪ್ಪು ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕೆಂಬ ವಿಚಾರದಲ್ಲೂ ಕೂಡ ವ್ಯವಹಾರ ನಡೆಯುತ್ತಾ ಇದೆ. ಬಹುಶಃ ಅದರಿಂದ ಎಲ್ಲರ ಅವಶ್ಯಕತೆಗಳನ್ನೂ ಕೂಡ ಪೂರೈಸುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ನಿರೀಕ್ಷಿಸಿ ಮಾಡುತ್ತೇನೆ.

Number of Deaf and Dumb Girls residing in the Vocational Institute at Mysore.

*Q.—142. **Smt. K. S. NAGARATHNAMMA** (Gundlupet).—

Will the Government be pleased to state :—

(*a*) the number of deaf and dumb girls residing in the Vocational Institute, Mysore;

(*b*) whether they have made any arrangements to give training in the said Institute to the physically handicapped, so as to enable them to eke out their livelihood ;

(*c*) whether any other institution has come forward to provide training to the physically handicapped in the State ?

A.—**Sri S. R. KANTHI** (Minister for Education).—

(*a*) 19 Deaf Girls.

(*b*) Industrial sections have been opened in the physically handicapped Institutions in order to provide training in crafts.

(*c*) Three private agencies have come forward to start Institutions for the phisically handicapped.—

(1) Janapada Seva Trust, Melkote.

(2) Mathru Mandali, Temple Road, V. V. Mohalla, Mysore-2.

(3) The Academy of General Education, Manipal, South India.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದಕ್ಕೆ ಸಂಬಂಧಪಟ್ಟಂತೆ ನಾನು ಇನ್ನೂ ಒಂದಿಷ್ಟು ಸಪ್ಲಿಮೆಂಟರಿ ಪ್ರಶ್ನೆಗಳನ್ನು ಕಳುಹಿಸಿದ್ದೆ.